**ನಿಂತಿರುವಾಗ, ಯಾರೋ ಒಬ್ಬರು 'ದಲಿತ ಕವಿ', 'ಮಹಿಳಾ ಕವಿ', 'ಕ್ವೀರ್ ಪೊಯೆಟ್' ಅಂತೆಲ್ಲಾ ಕರೆದರೆ ಸಮಸ್ಯೆ ಅಂತ ನಿಮಗನಿಸುತ್ತಾ? ಒಮ್ಮೊಮ್ಮೆ ಕೆಲವೊಂದು ಕಡೆ ಮೀಸಲಾತಿ ಕೊಡೋ ತರ ಒಬ್ರು ಕ್ವೀರ್ ಪೊಯೆಟ್ ಹಾಕೋಳಿಪ ಅನ್ನೋ ತರ ಕೇಳಿಸತ್ತಾ? ಇದನ್ನೆಲ್ಲಾ ನೀವು ಹೇಗೆ ನೋಡುತ್ತೀರಿ?**

ಎಷ್ಟೋ ಸಲ ಜೀವನದಲ್ಲಿ ಜಗತ್ತು ನಮ್ಮನ್ನು ಹೇಗೆ ನೋಡಲು ಬಯಸುತ್ತದೋ ಆ ರೀತಿ ಇರೋದಕ್ಕೆ ಪ್ರಯತ್ನ ಪಡ್ತಾ ಇರ್ತೀವಿ. ಅದು ನಮ್ಮ ಮೇಲೇನೆ ನಮಗೆ ಪ್ರೀತಿ ಇಲ್ಲದೆ ಇದ್ದಾಗ, ವಿಶ್ವಾಸ ಇಲ್ಲದಾಗ, ನಮ್ಮ ಪ್ರತಿಭೆಯ ಬಗ್ಗೆ ನಂಬಿಕೆ ಇಲ್ಲದಿದ್ದಾಗ ಆ ತರ ಆಗತ್ತೆ. ನಮ್ಮ ಅಸ್ತಿತ್ವವನ್ನು ತುಂಬಾ ಅಳ್ಳಕವಾಗಿ ತೋರಿಸಿದಾಗ ಹಾಗಾಗತ್ತೆ. ಹಾಗಾದಾಗ ಜಗತ್ತು ನಮ್ಮನ್ನು ಅದೇ ಕನ್ನಡಿಯಲ್ಲಿ ನೋಡೋದಕ್ಕೆ ಶುರುಮಾಡುತ್ತೆ. ಇದು ನನಗೆ ಬೇಗನೆ ಅರಿವಿಗೆ ಬಂತು ಅನ್ನಬಹುದು. ಆ ಕಾವ್ಯಗೋಷ್ಠಿಯಲ್ಲಿ ನೀವೂ ಕೂಡ ಕೇಳುಗರಾಗಿ ಇದ್ರಿ. 'ಕ್ವೀರ್ ಪೊಯೆಟ್', 'ಟ್ರಾನ್ಸ್‌ಜೆಂಡರ್ ಪೊಯೆಟ್' ಅಂತ ಕರೆದಿದ್ದು ನನಗೆ ಯಾಕೋ ಸರಿ ಅನಿಸಲಿಲ್ಲ. ನಾನು ಆ ಎಲ್ಲಾ ಸೀಮಿತತೆಯನ್ನು ಮೀರಿದ ಒಬ್ಬ ಕವಿ ಅಂತ ಅನಿಸೋದಕ್ಕೆ ಶುರು ಆಯ್ತು. ನನಗೆ ನೇರವಾಗಿ ಹೇಳೋದಕ್ಕಿಂತ ಕವಿತೆಯ ಮೂಲಕವೇ ಅಭಿವ್ಯಕ್ತಿಸೋದು ಉತ್ತಮ ಅನಿಸಿ ಹಾಗೆ ಮಾಡಿದೆ. ನೀವು ಪ್ರಸ್ತಾಪಿಸಿದ ವಿಷಯ ಒಂದು ಉದಾಹರಣೆ ಅಷ್ಟೇ. ಆ ರೀತಿಯ ಮೀರುವಿಕೆಯನ್ನು ನನ್ನ ಇಡೀ ಜೀವನದ ಉದ್ದಕ್ಕೂ ಮಾಡ್ತಾನೇ ಬಂದಿದೀನಿ. ಯಾರ ಜಪ್ಪಿಗೂ ಸಿಗದೇ ಉಳಿಯೋದು ನನಗೆ ಇಷ್ಟ. ಅದು ನನ್ನ ಆಯ್ಕೆ ಕೂಡ. ಸಾಂಸ್ಕೃತಿಕ ವೇದಿಕೆಗಳಲ್ಲಿ ಬಹುತ್ವದ ದನಿಗಳನ್ನು ಒಳಗೊಳ್ಳೋದು ಬಹಳ ಮುಖ್ಯ. ಆದರೆ ಹಾಗಾಗುವಾಗ ಅದು ಮೀಸಲಾತಿಗೆ ಬಂದು ನಿಲ್ಲೋದರ ಬಗ್ಗೆ ನನ್ನ ಪ್ರಶ್ನೆಗಳಿದ್ದವು. ಭಾವದಲ್ಲಿ ಬೆಳೆಯೋ ಬೇಡವಾದ ಕಳೆಯ ಬಗ್ಗೆ ನಾನು ಪ್ರಶ್ನಿಸ್ತಾ ಬಂದೆ.

◆ **ಸಾಹಿತ್ಯವಲಯದಲ್ಲಿ ಮತ್ತೆ ಮತ್ತೆ ಕೇಳೋ ಪ್ರಶ್ನೆ ಅಂದ್ರೆ 'ನಿಮ್ಮ ಸಂಕಲನ ಬಂದಿದ್ಯಾ?' ಅಂತ. ನಾನು ಕೂಡ ನಿಮಗೆ ಒಂದು ಕವನ ಸಂಕಲನ ಮಾಡಿ ಅನ್ನೋ ಒತ್ತಾಯ ಮಾಡ್ತಾನೆ ಬಂದಿದೀನಿ. ಆದ್ರೆ ನೀವು ಅದರ ಬಗ್ಗೆ ಹೆಚ್ಚಾಗಿ ತಲೆಕೆಡಿಸಿಕೊಂಡಿಲ್ಲ. ನನಗದು ಕವಿತೆ ಬರೆಯೋದಷ್ಟೇ ಮುಖ್ಯ ಮತ್ತು ಪ್ರಕಟಣೆ ಆಗೋ ಕಾಲಕ್ಕೆ ಆಗತ್ತೆ ಅಂದುಕೊಂಡಿರುವ ತರ ಅನಿಸ್ತಾ ಇರತ್ತೆ. ನೀವು ಹಲವು ಸಲ ಪ್ರಕಟಣೆಯ ಗೋಜಿಗೂ ಹೋಗದೆ ನಿಮ್ಮ ಪಾಡಿಗೆ ನೀವು ಕವಿತೆಯನ್ನು ಬರೆಯುತ್ತಾ ಹೋದವರು, ಮತ್ತೆ ಮತ್ತೆ ಕವಿತೆಗೆ ಆತುಕೊಳ್ಳುತ್ತಾ ಹೋದವರು. ಇದನ್ನೆಲ್ಲಾ ನೀವು ಹೇಗೆ ನೋಡ್ತೀರಿ?**

ನನಗೆ ತುಂಬಾ ಜನ ಹೇಳ್ತಾರೆ. ಒಂದು ಕವನ ಸಂಕಲನ ಬರೀರಿ. ಒಂದು ಆತ್ಮಕಥನ ಬರೀರಿ ಅಂತ. ಆದ್ರೆ ನನಗೆ ಯಾಕೋ ಏನೋ ಪುಸ್ತಕ ಬರೀಬೇಕು ಅಂತ ಅನಿಸಲೇ ಇಲ್ಲ. ಬಹುಶಃ ಬೇರೆಯವರಿಗೋಸ್ಕರ ನಾನು ಬರಿಯಲ್ಲ ಅನ್ನೋದೇ ಮುಖ್ಯ ಕಾರಣ ಇರಬಹುದು ಅಥವಾ ಬರೆದರೆ ಇಲ್ಲಿವರೆಗೂ ಬಂದದ್ದಕ್ಕಿಂತ ಹೊಸದಾಗಿ ಬರೀಬೇಕು ಅಂತ ಕಾಯ್ತಾ ಇದೀನಿ ಅಂತಾನೂ ಅನ್ನತ್ತೆ.

◆ **ನೃತ್ಯ ಕೂಡ ನಿಮ್ಮ ಜೀವನದ ಅವಿಭಾಜ್ಯ ಅಂಗವಾಗಿದೆ. ನೃತ್ಯಕಲೆ ಹೇಗೆ ನಿಮ್ಮ ಜೀವನವನ್ನು ಪ್ರಭಾವಿಸಿದೆ? ನಿಮ್ಮ ಜೀವನದಲ್ಲಿ ಮಿಳಿತಗೊಂಡಿದೆ?**

ಕವಿತೆ ಮತ್ತು ನೃತ್ಯ ನನ್ನ ಅವಳಿಜವಳಿ ಮಕ್ಕಳಿದ್ದ

> **ಬಹುತ್ವದ ದನಿಗಳನ್ನು ಒಳಗೊಳ್ಳೋದು ಬಹಳ ಮುಖ್ಯ. ಆದರೆ, ಹಾಗಾಗುವಾಗ ಅದು ಮೀಸಲಾತಿಗೆ ಬಂದು ನಿಲ್ಲೋದರ ಬಗ್ಗೆ ನನ್ನ ಪ್ರಶ್ನೆಗಳಿದ್ದವು. ಭಾವದಲ್ಲಿ ಬೆಳೆಯೋ ಬೇಡವಾದ ಕಳೆಯ ಬಗ್ಗೆ ನಾನು ಪ್ರಶ್ನಿಸ್ತಾ ಬಂದೆ.**